ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತಮೂರನೆಯ ಅಧಿವೇಶನ
ಸೋಮವಾರ, ದಿನಾಂಕ : 01 ನೇ ಫೆಬ್ರುವರಿ, 2021

ಹೆಗ್ಗಡದೇವನ ಕೋಟೆ ಮತ್ತು ನಂಜನಗೂಡು ತಾಲ್ಲೂಕಿನಲ್ಲಿ ಆನೆಗಳ ಕಾಟದಿಂದ ಬೆಳೆನಾಶವಾಗಿರುವ ಬಗ್ಗೆ

ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

157 (66) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಹೆಗ್ಗಡದೇವನ ಕೋಟೆ ತಾಲ್ಲೂಕು, ನುಗು ಜಲಾಶಯದ ಹಿನ್ನೀರಿನಲ್ಲಿರುವ ಹಳೆಹೆಗ್ಗುಡಿಲು ಪುನರ್ ವಸತಿ ಗ್ರಾಮ ಹಾಗೂ ಸುತ್ತಮುತ್ತಲ ಗ್ರಾಮಗಳಲ್ಲಿ ಸತತವಾಗಿ ಕಾಡಾನೆಗಳು ಹಾಗೂ ಕಾಡುಹಂದಿಗಳಿಂದ, ಬೆಳೆ ನಾಶವಾಗಿ ರೈತರಿಗೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಭಾಗದ ಎಷ್ಟು ಗ್ರಾಮಗಳಲ್ಲಿ ಎಷ್ಟು ಬಾರಿ ಆನೆ ಹಾಗೂ ವನ್ಯಜೀವಿಗಳ ದಾಳಿ ಆಗಿದೆ; ಎಷ್ಟು ರೈತರ ಬೆಳೆ ನಾಶವಾಗಿದೆ; ರೈತರಿಗೆ ಒದಗಿಸಲಾದ ಪರಿಹಾರ ಎಷ್ಟು; (ವಿವರ ಒದಗಿಸುವುದು)

(ಆ) ಈ ಭಾಗದಲ್ಲಿ ಆನೆ ದಾಳಿ ತಡೆಗಟ್ಟಲು ನಿರ್ಮಿಸಿರುವ ಟ್ರೆಂಚ್(ಕಂದಕ)ಗಳಲ್ಲಿ ಹೂಳು ತುಂಬಿರುವುದು ಹಾಗೂ ಅಳವಡಿಸಿರುವ ಸೋಲಾರ್ ಬೇಲಿ ಕಾರ್ಯನಿರ್ವಹ ಣೆ ಮಾಡದಿರುವುದರಿಂದ ಆನೆಗಳು ಸತತವಾಗಿ ಜಮೀನುಗಳ ಮೇಲೆ ದಾಳಿ ಮಾಡಿ ಬೆಳೆ ನಾಶ ಮಾಡುತ್ತಿರುವುದರಿಂದ ಕಂದಕ ಮತ್ತು ಸೋಲಾರ್ ಬೇಲಿಯನ್ನು ಸೂಕ್ತವಾಗಿ ನಿರ್ವಹಿಸುವ ಮೂಲಕ ಆನೆ ದಾಳಿಯನ್ನು ತಡೆಗಟ್ಟಲು ಕ್ರಮ ತೆಗೆದು ಕೊಳ್ಳಲಾಗುವುದೇ;

(ಇ) ನಂಜನಗೂಡು ತಾಲ್ಲೂಕು, ಕಸುವಿನಹಳ್ಳಿ, ಮಾಕನಪುರ, ದೇಪಗೌಡನಪುರ, ಮಲ್ಲಹಳ್ಳಿ, ಕೆಲ್ಲೂರುಪುರ, ಸಿದ್ದಯ್ಯನಹುಂಡಿ, ಮುಂತಾದ ಗ್ರಾಮಗಳಲ್ಲಿ ಕಾಡಾನೆಗಳ ರೈತರ ಜಮೀನುಗಳಲ್ಲಿ ಬೆಳೆದಿರುವ ಬೆಳೆಯನ್ನು ನಾಶಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಭಾಗದ ಎಷ್ಟು ಗ್ರಾಮಗಳಲ್ಲಿ ಎಷ್ಟು ಬಾರಿ ಆನೆ ಹಾಗೂ ವನ್ಯಜೀವಿಗಳ ದಾಳಿ ಆಗಿದೆ, ಹಾಗೂ ರೈತರ ಬೆಳೆ ನಾಶವಾಗಿದೆ, ರೈತರಿಗೆ ಒದಗಿಸಲಾದ ಪರಿಹಾರ ಎಷ್ಟು ? (ವಿವರ ಒದಗಿಸುವುದು)